ಓ.ಎಸ್. ನಂ.143/2016
ಪಿಡಬ್ಲು-1

ದಿನಾಂಕ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಬಿರಾಳ ಕೆ. ಗ್ರಾಮದಲ್ಲಿ ಒಟ್ಟು 1000 ಮನೆಗಳಿವೆ. ನಾವು 05-ಜನ ಸಹೋದರರು ಇರುತ್ತೇವೆ. 1ನೆ ಪ್ರತಿವಾದಿಗೆ ಹುಲಕಲ್ ಗ್ರಾಮದಲ್ಲಿ ಆಸ್ತಿ ಇದ್ದ ವಿಚಾರ ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿಯ ಯಾವಾಗ ತೀರಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಈ ಕುರಿತು ನನ್ನ ದಾವೆಯಲ್ಲಿ ಬರೆಸಿಲ್ಲ. 2ನೆ ಪ್ರತಿವಾದಿ ದಾವಾ ಸ್ವತ್ತನ್ನು ಅಡಮಾನ ಮಾಡುವ ಮೊದಲು ನನ್ನ ಸಹೋದರರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಖರೀದಿ ಪತ್ರವನ್ನು ಯಾವ ದಿನಾಂಕದಂದು ಬರೆದುಕೊಂಡಿತ್ತೀರಾ ಎಂದರೆ ಸಾಕ್ಷಿ 1987 ರಲ್ಲಿ ಬರೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. 1987 ರಿಂದ 2016 ರವರೆಗೆ 27-ವರ್ಷಗಳಾದರೂ ನೀವು ಯಾವುದೆ ನೊಂದಾಯಿತ ಖರೀದಿ ಪತ್ರ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ 1ನೆ ಪ್ರತಿವಾದಿಯ ತಂದೆ ತಮ್ಮಣ್ಣರವರು ಮೃತಪಟ್ಟಿದ್ದರಿಂದ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಸದರಿ ತಮ್ಮಣ್ಣ ಮೃತಪಟ್ಟು ಅಂದಾಜು 20-25 ವರ್ಷಗಳಾಗಿರಬಹುದು. ಈ ಕುರಿತು ನಮ್ಮ ವಕೀಲರಿಗೆ ಮಾಹಿತಿ ನೀಡಿಲ್ಲ. 27-ವರ್ಷಗಳಿಂದ ದಾವಾಸ್ತಿಯ ಕಂದಾಯ ಕಟ್ಟಿದ್ದೀರಾ ಎಂದರೆ ಸಾಕ್ಷಿ ಕಟ್ಟಿಲ್ಲ ಎಂದು ಹೇಳುತ್ತಾರೆ. ನಾನು ದಾವಾ ಸ್ವತ್ತಿನ ಕಬ್ಜೆಯಲ್ಲಿಲ್ಲ ಎಂದರೆ ಸರಿಯಲ್ಲ.

3ನೆ ಪ್ರತಿವಾದಿಯು 1ನೆ ಪ್ರತಿವಾದಿಯಿಂದ ದಾವಾಸ್ತಿ ಖರೀದಿ ಮಾಡಲು ಸರ್ವೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ನಾವೆ ಸರ್ವೆ ಮಾಡಬೇಕು ಎಂದು ಹೇಳುತ್ತಾರೆ. ನಾನು ದಾವಾಸ್ತಿಯ ಕಬ್ಜಯಲ್ಲಿದ್ದರೆ ಸರ್ವೆದವರು ನನಗೆ ನೋಟಿಸು ಕೊಡುತ್ತಿದ್ದರು ಎಂದರೆ ನನಗೆ ನೋಟಿಸು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಜಮೀನು ಸರ್ವೆ ಆದ ನಂತರ ನಾನು ನನ್ನ ತಮ್ಮ ಅಂಬಾರಾಯ ಸೇರಿ ಬಸುಗೌಡ ನರಿಬೋಳರವರಲ್ಲಿ ನ್ಯಾಯ ಪಂಚಾಯತಿಗೆ ಹೋಗಿರುತ್ತೇವೆ ಎಂದರೆ ಸರಿ. ದಾವಾಸ್ತಿಯನ್ನು ಅಡಮಾನ ಮಾಡಿದ ನಂತರ ನಾನು ನಾನು ಕಂದಾಯ ಇಲಾಖೆ ಅಧಿಕಾರಿಗಳಿಗೆ ತಕರಾರು ಮಾಡಿಲ್ಲ ಎಂದರೆ ಸರಿ. ಖರೀದಿ ಪತ್ರವನ್ನು ಯಾರು ಬರೆದಿದ್ದಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. 1 ಮತ್ತು 2ನೆ ಪ್ರತಿವಾದಿಯರಿಗೆ ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ ಆದರೆ ಅವರು ಹುಲಕಲ್‌ಗೆ ಹೋಗಿ ಬರುವುದು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಖರೀದಿ ಪತ್ರ ಬರೆಯುವಾಗ ನಾನು ಸ್ಥಳದಲ್ಲಿ ಇರಲಿಲ್ಲ ನನ್ನ ಸಹೋದರ ಅಂಬಾರಾಯ ಇದ್ದ ಎಂದು ಹೇಳುತ್ತಾರೆ. ಖರೀದಿ ಪತ್ರ

ಬರೆಯುವಾಗ ಉಸ್ಮಾನ ಅಲಿ, ಹನೀಫ, ಶರಣಪ್ಪ ಇದ್ದರು ಎಂದು ಹೇಳುತ್ತಾರೆ. 1ನೆ ಪ್ರತಿವಾದಿಯ ತಂದೆಯ ಹಣಕಾಸು ಸ್ಥಿತಿ ಚೆನ್ನಾಗಿತ್ತು ಎಂದರೆ ಸಾಕ್ಷಿ ಮೊದಲು ಅನುಕೂಲ ಇದ್ದರು ಎಂದು ಹೇಳುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ